ಸಿ.ಸಿ .ನಂ. 197/2023 ಪಿಡಬ್ಲೂಃ 1

ದಿನಾಂಕಃ 23-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಪಿ ಎಸ್ ಎನ್ ವಕೀಲರಿಂದಃ**

6. ಸಾಲದ ಖಾತೆಯ ದಾಖಲಾತಿಗಳಿಗೆ ಸಾಲದ ಅರ್ಜಿಗೆ ಒಂದು ಸಲ ಸಹಿ ಪಡೆದುಕೊಂಡಿದ್ದೇವೆ . ಲೋನ್ ಸಾಂಕ್ಷನ್ ಆಗಿ ಬಂದ ನಂತರ ಉಳಿದ ದಾಖಲಾತಿಗಳಿಗೆ ಸಹಿ ಪಡೆದಿದ್ದೇವೆ . ಈ ಪ್ರಕರಣದ ಸಾಲದ ಅರ್ಜಿಗೆ ಸಾಲ ಮಂಜೂರಾಗಿದೆ ಎಂದು ತೋರಿಸಲು ಯಾವುದೇ ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಸರಿ . ಈ ಪ್ರಕರಣದ ಸಾಲದ ಹಣವನ್ನು ಅವರ ಉಳಿತಾಯ ಖಾತೆಗೆ ಹಾಕಿದ್ದೇವೆ , ಯಾವ ಮೂಲಕ ಹಾಕಿದ್ದೇವೆ ನೆನಪಿಲ್ಲ. ಸಾಲದ ಹಣವನ್ನು ಯಾವ ರೀತಿ ಹಾಕಿದ್ದೇವೆ ಅದನ್ನು ತೋರಿಸಲು ದಾಖಲಾತಿ ಇಲ್ಲ ಎಂದರೆ ಸಾಕ್ಷಿ ಎಸ್ ಬಿ ಸ್ಟೇಟ್ ಮೆಂಟ್ ಇದೆ ಎಂದು ನುಡಿದಿರುತ್ತಾರೆ . ಈ ಪ್ರಕರಣದಲ್ಲಿ ಯಾವುದೇ ಅಕೌಂಟ್ ಸ್ಟೇಟ್ ಮೆಂಟ್ ನ್ನು ಹಾಜರು ಪಡಿಸಿಲ್ಲ ಎಂದರೆ ಸರಿ . ಒಂದು ಸಾಲದ ಅರ್ಜಿ ಬಂದಾಗ ಆ ಸಾಲಗಾರನ ಹಾಗೂ ಜಾಮೀನುದಾರನ ವಿಳಾಸ ಖಚಿತ ಪಡಿಸಿಕೊಳ್ಳಲು ಅವರ ಆಧಾರ ಕಾರ್ಡ ಹಾಗೂ ವೋಟರ ಐಡಿ , ರೇಶನ್ ಕಾರ್ಡ ಪಡೆದುಕೊಳ್ಳುತ್ತೇವೆ ಎಂದರೆ ಸರಿ . ಈ ಪ್ರಕರಣದಲ್ಲಿ ಅಂತಹ ದಾಖಲಾತಿಗಳನ್ನು ಪಡೆದುಕೊಂಡಿದ್ದೇವೆ . ಅದರಲ್ಲಿ ಇರುವ ವಿಳಾಸ ಸಾಲದ ಅರ್ಜಿಯಲ್ಲಿ ಖಚಿತ ಪಡಿಸಿಕೊಳ್ಳುತ್ತೇವೆ ಎಂದರೆ ಸರಿ . ಸಾಕ್ಷಿಗೆ ಗಜಾನನ ಗಣಪತಿ ನಾಯ್ಕರವರ ಆಧಾರ ಕಾರ್ಡನ ನೋಟರೈಜ್ ಪ್ರತಿಯನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿರುತ್ತಾರೆ ಕಾರಣ ನಿಡಿ -1 ಎಂದು ಗುರುತಿಸಲಾಯಿತು . ಆರೋಪಿಯ ವೋಟರ ಐಡಿ ನೋಟರೈಜ್ ಪ್ರತಿಯನ್ನು ತೋರಿಸಲಾಗಿ ಅದನ್ನು ಪಡೆದುಕೊಂಡಿದ್ದೀರಿ ಎಂದರೆ ಸರಿ ಎಂದು ಸಾಕ್ಷಿ ದಾಖಲಾತಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ದಾಖಲಾತಿಯನ್ನು ನಿಡಿ-2 ಎಂದು ಗುರುತಿಸಲಾಯಿತು. ಆರೋಪಿಯ ರೇಶನ್ ಕಾರ್ಡನ ನೋಟರೈಜ್ ಪ್ರತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಡಿ -3 ಎಂದು ಗುರುತಿಸಲಾಯಿತು. ಈ ಎಲ್ಲಾ ದಾಖಲಾತಿಗಳಲ್ಲಿ ಆರೋಪಿಯ ವಿಳಾಸ ಗಜಾನನ ಗಣಪತಿ ನಾಯ್ಕ, ಶಶಿಹಿತ್ತಲು, ಹಿರೇಗುತ್ತಿ ಕುಮಟಾ

ಎಂದು ಇದೆ ಎಂದರೆ ಸರಿ . ಹಿಗೇಗುತ್ತಿಗೆ ಸಂಬಂಧಪಟ್ಟಂತೆ ಹಿರೇಗುತ್ತಿ ಗ್ರಾಮ ಹಿರೇಗುತ್ತಿ ಪೋಸ್ಟನಲ್ಲಿ ಬರುತ್ತದೆ. ಹಿರೇಗುತ್ತಿ ಪೋಸ್ಟನ ವ್ಯಾಪ್ತಿಯಲ್ಲಿ ಕಿಮಾನಿ ಎಂಬ ಊರು ಇಲ್ಲ ಎಂದರೆ ಸರಿ . ಕಿಮಾನಿ ವ್ಯಾಪ್ತಿಯ ಬಗ್ಗೆ ನನಗೆ ಮಾಹಿತಿ ಇದೆ. ಕಿಮಾನಿ ಪೋಸ್ಟ ವ್ಯಾಪ್ತಿಯಲ್ಲಿ ಹಿರೇಗುತ್ತಿ ಬರುವುದಿಲ್ಲ ಎಂದರೆ ಸರಿ . ಯಾವುದೇ ಒಂದು ರಜಿಸ್ಟರ ಪೋಸ್ಟ ಕಳುಹಿಸುವಾಗ ಅಂಚೆಯಲ್ಲಿ ನಿಖರವಾಗಿ ಸರಿಯಾದ ವಿಳಾಸ ಬರೆಯಬೇಕಾಗುತ್ತದೆ ಎಂದರೆ ಸರಿ . ಅದೇ ರೀತಿ ರಜಿಸ್ಟರ ಅಂಚೆಗೆ ಎಷ್ಟು ಸರಿಯಾದ ಹಣ ಬೇಕಾಗುತ್ತದೆ ಅಷ್ಟು ಸ್ಟಾಂಪ ಹಣವನ್ನು ತುಂಬಬೇಕಾಗುತ್ತದೆ ಎಂದರೆ ಸರಿ . ನಾನು ಯಾವುದೋ ವಿಳಾಸವನ್ನು ಯಾವುದೇ ಪೋಸ್ಟ ಆಫೀಸ್ ಗೆ ಕಳುಹಿಸಿದರೆ ಅದನ್ನು ಅಂಚೆ ಇಲಾಖೆಯವರು ಸರಿಯಾಗಿ ಜಾರಿ ಮಾಡಲು ಆಗುವುದಿಲ್ಲ ಎಂದರೆ ಸಾಕ್ಷಿ ಒಂದು ವೇಳೆ ಮಿಸ್ ಆಗಿ ಬೇರೆ ಅಂಚೆ ಕಚೇರಿಯಿಂದ ಬಂದಿದ್ದರೆ ಆ ಇಲಾಖೆಯವರು ವ್ಯಾಪ್ತಿ ಇರುವ ಅಂಚೆ ಕಚೇರಿಗೆ ಸದರಿ ಪೋಸ್ಟನ್ನು ಕಳುಹಿಸಬಹುದು ಎಂದು ನುಡಿದಿರುತ್ತಾರೆ . ಒಂದುವೇಳೆ ಆ ರೀತಿ ಕಳುಹಿಸಿದರೆ ತಪ್ಪು ಇರುವ ವಿಳಾಸದ ಬಗ್ಗೆ ಆ ರೀತಿ ಬರೆದು ಕಳುಹಿಸುತ್ತಾರೆ ಎಂದರೆ ಸರಿ . ಈ ಪ್ರಕರಣದಲ್ಲಿ ವಕೀಲರ ಮೂಲಕ ಆರೋಪಿಗೆ ನೋಟಿಸನ್ನು ಕೊಟ್ಟಿದ್ದೇವೆ . ನಾವು ಆರೋಪಿಯ ಹಿರೇಗುತ್ತಿ ವಿಳಾಸಕ್ಕೆ ನೋಟಿಸನ್ನು ಕೊಟ್ಟಿದ್ದೇವೆ . ಕಿಮಾನಿ ವಿಳಾಸಕ್ಕೆ ನೋಟಿಸನ್ನು ಕೊಟ್ಟಿಲ್ಲ. ನೋಟಿಸಿನ ಮೇಲೆ ವಿಳಾಸ ಬರೆದ ನಂತರ ಅದು ಸರಿಯಾಗಿದೆ ಎಂದು ನಾವು ಖಚಿತ ಪಡಿಸಿಕೊಂಡಿದ್ದೀರಾ ಎಂದರೆ ಸಾಕ್ಷಿ ಲೇಗಲ್ ನೋಟಿಸನ್ನು ವಕೀಲರು ಕಳುಹಿಸುತ್ತಾರೆ ಎಂದು ನುಡಿದಿರುತ್ತಾರೆ . ನ್ಯಾಯಾಲಯದಲ್ಲಿ ಹಾಜರು ಪಡಿಸಿರುವ ಎಲ್ಲಾ ದಾಖಲಾತಿಗಳು ನಮ್ಮ ಕಸ್ಟಡಿಯಲ್ಲಿರುವ ದಾಖಲಾತಿ ಎಂದರೆ ಸರಿ . ಈ ಪ್ರಕರಣ ದಾಖಲಿಸುವ ಸಂದರ್ಭದಲ್ಲಿ ನೋಟಿಸನ್ನು ಯಾವ ವಿಳಾಸಕ್ಕೆ ಕಳಿಸಿದ್ದಾರೆ ನೋಡಿ ಖಚಿತ ಪಡಿಸಿಕೊಂಡಿಲ್ಲ. ನಾವು ಕಳುಹಿಸಿದ ನೋಟಿಸು ಆರೋಪಿಗೆ ತಲುಪಿದೆ . ನೋಟಿಸು ತಲುಪಿದ ಅಂಚೆ ಸ್ವೀಕೃತಿಯನ್ನು ನಾವು ನೋಡಿದ್ದೇವೆ . ಅದರ ಆಧಾರದ ಮೇಲೆ ನೋಟಿಸು ತಲುಪಿದೆ ಎಂದು ಹೇಳುತ್ತಿದ್ದೇವೆ . ಸದರಿ ಅಂಚೆ ರಸೀದಿಯನ್ನು ಹಾಗೂ ಅಂಚೆ ಸ್ವೀಕೃತಿಯನ್ನು ಈ ಪ್ರಕರಣದಲ್ಲಿ ಹಾಜರು ಮಾಡಿದ್ದೇವೆ . ಸಾಕ್ಷಿ ಕೇಸಿನ ಕಡತವನ್ನು ನೋಡಿ ಅಂಚೆ ರಸೀದಿ ಇದೆ , ಅಂಚೆ

ಸ್ವೀಕೃತಿ ಇಲ್ಲ ಎಂದು ನುಡಿದಿರುತ್ತಾರೆ . ನಮ್ಮ ಪ್ರಕಾರ ನಾವು ಅದೇ ಅಂಚೆ ರಸೀದಿ ಮೂಲಕ ನೋಟಿಸು ಕಳಿಸಿರುತ್ತೇವೆ . ಯಾವುದೇ ಒಂದು ನೋಟಿಸನ್ನು ಅಂಚೆ ಮೂಲಕ ಕಳಿಸಿದ್ದಾಗ ಅದಕ್ಕೆ ಆರ್ ಕೆ ನಂಬರ ಎಂದು ಇರುತ್ತದೆ ಎಂದರೆ ಸರಿ . ಆ ನಂಬರಕ್ಕೆ ಸಂಬಂಧಪಟ್ಟಂತೆ acknowledgment, postal cover ಹಾಜರು ಪಡಿಸಿಲ್ಲ. ಅದರ ನಂ. RK 734020697IN ಎಂದರೆ ಸರಿ . ಇದೇ ಆರ್ ಕೆ ನಂಬರಿಗೆ ಸಂಬಂಧಪಟ್ಟಂತೆ ಅದೇ ನಂಬರನ್ನು ಅಂಚೆ ಕವರ ಮೇಲೆ ಅಂಟಿಸಲಾಗಿದೆ ಎಂದರೆ ಸರಿ . ಹಾಗಿದ್ದರೆ ನಾವು ಕಳಿಸಿರುವ ಅಂಚೆ ರಸೀದಿಗೆ ಸಂಬಂಧಪಟ್ಟಂತೆ ಇದೆ ಲಕೋಟೆ ಹೌದು ಎಂದರೆ ಸರಿ . ಅಂಚ ಲಕೋಟೆ ಯಾವ ಕಾರಣಕ್ಕೆ ಪರತ್ ಬಂದಿದೆ ತಿಳಿದುಕೊಂಡಿಲ್ಲ. ಪ್ರಕರಣ ದಾಖಲಿಸುವಾಗ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ಆ ಸಂದರ್ಭದಲ್ಲಿ ನೋಟಿಸು ಜಾರಿಯಾಗಿದೆ ಎದು ಮಾಹಿತಿ ಕೊಟ್ಟಿದ್ದೇನೆ . ನೋಟಿಸು ಜಾರಿಯಾಗಿರುವ ದಾಖಲಾತಿ ನೋಡಿದ್ದೇನೆ . ಅದೇ ದಾಖಲಾತಿ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇವೆ . ಅದು ನಿಪಿ-6. ಅದರ ಲಕೋಟೆಯ ಮೇಲೆ ವಿಳಾಸದಾರರು ಕಿಮಾನಿಯಲ್ಲಿ ಯಾರು ಇಲ್ಲದ ಕಾರಣ ಪರತ್ ಕಳಿಸಿದೆ ಎಂದು ಬರೆದಿದೆ ಎಂದರೆ ಸರಿ . ಅದೇ ಲಕೋಟೆಯ ಮೇಲೆ ಪೋಸ್ಟ ಕಿಮಾನಿ ಎಂದು ಬರೆದಿರುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ ಎಂದರೆ ಸರಿ . ಸದರಿ ಲಕೋಟೆ ಆರೋಪಿಯ ಹಿರೇಗುತ್ತಿ ಪೋಸ್ಟ ವಿಳಾಸಕ್ಕೆ ಕಳಿಸಿಲ್ಲ ಇದು ಕಿಮಾನಿ ಪೋಸ್ಟ ವಿಳಾಸಕ್ಕೆ ಕಳಿಸಿದ್ದೇವೆ ಎಂದರೆ ಸಾಕ್ಷಿ ಆರೋಪಿಯ ಪೋಸ್ಟು ಕಿಮಾನಿ ಎಂದು ತಪ್ಪಾಗಿ ಬರೆದಿದೆ ಎಂದು ನುಡಿದಿರುತ್ತಾರೆ . ಅಂಚೆ ಸೇವಕರು ವಿಳಾಸವನ್ನು ಹೊಡೆದು ಹಾಕಿ ಬೇರೆ ವಿಳಾಸವನ್ನು ಬರೆದಿಲ್ಲ ಎಂದರೆ ಸರಿ .

7. ಈ ಪ್ರಕರಣದ ಚೆಕ್ ಯಾವ ಕಾರಣಕ್ಕೆ ಬೋನ್ಸ ಆಗಿ ಬಂತು ನೋಡಿದ್ದೇನೆ ಆದರೆ ನೆನಪಿಲ್ಲ . ಯಾವ ಕಾರಣಕ್ಕೆ ಬೋನ್ಸ ಆಗಿ ಬಂತು ಎಂದು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹಾಗೂ ಫಿರ್ಯಾದಿನಲ್ಲಿ ಏನು ಕಾರಣ ಬರೆಸಿದ್ದೇನೆ ನೆನಪಿಲ್ಲ . ನಾವು ಹೇಳಿದ ಪ್ರಕಾರ ಆರೋಪಿ ಫಿರ್ಯಾದು ಬ್ಯಾಂಕಿಗೆ ಬಂದು ಚೆಕ್ ನ್ನು ಕೊಟ್ಟು ನಗದೀಕರಿಸಿಕೊಳ್ಳಿ ಎಂದು ಹೇಳಿ ಸಹಿ ಮಾಡಿ ಕೊಟ್ಟಿದ್ದು ಇಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಚೆಕ್ ನ್ನು ಒಟ್ಟೂ ಒಂದು ಬಾರಿ ನಗದೀಕರಣಕ್ಕೆ ಹಾಕಿದ್ದೇವೆ . ಫಿರ್ಯಾದಿನಲ್ಲಿ ,

ನೋಟಿಸಿನಲ್ಲಿ ಹಾಗೂ ನನ್ನ ಮುಖ್ಯ ವಿಚಾಣೆಯ ಪ್ರಮಾಣ ಪತ್ರದಲ್ಲಿ ಚೆಕ್ ನ್ನು ಹಲವು ಬಾರಿ ನಗದೀಕರಣಕ್ಕೆ ಹಾಕಿದ ಬಗ್ಗೆ ಹೇಳಿರುವ ಬಗ್ಗೆ ನನಗೆ ನೆನಪಿಲ್ಲ . ಒಂದು ಚೆಕ್ ನ್ನು ಎಷ್ಟು ಬಾರಿ ನಗದೀಕರಣಕ್ಕೆ ಹಾಕಿದರೂ ಕೂಡ ಪ್ರತಿಬಾರಿ ಕೂಡ ಯಾವ ಕಾರಣಕ್ಕೆ ನಗದೀಕರಣ ಆಗಿಲ್ಲ ಹಿಂಬರಹ ಕೊಡುತ್ತಾರೆ ಎಂದರೆ ಸರಿ . ಒಂದುವೇಳೆ ಒಂದಕ್ಕಿಂತ ಹೆಚ್ಚು ಬಾರಿ ನಗದೀಕರಣಕ್ಕಾಗಿ ಚೆಕ್ ನ್ನು ಹಾಜರು ಪಡಿಸಿದರೆ ಪ್ರತಿಬಾರಿ ಕೊಟ್ಟಿರುವ ಹಿಂಬರಹವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಬೇಕಾಗುತ್ತದೆ ಎಂದರೆ ಸಾಕ್ಷಿ ಕೊನೆಯದಾಗಿ ಕೊಟ್ಟಿರುವ ಹಿಜಬರಹವನ್ನು ಜಾಜರು ಪಡಿಸಿದರೆ ಸಾಕಾಗುತ್ತದೆ ಎಂದು ನುಡಿದಿರುತ್ತಾರೆ. ಈ ಪ್ರಕರಣದ ಸಾಲದ ಅರ್ಜಿ ನಿಪಿ-7 ಬಂದ ಸಮಯದಲ್ಲಿ ಎಲ್ಲಾ ದಾಖಲಾತಿಗಳಿಗೂ ಒಂದೇ ಬಾರಿ ಸಹಿಗಳನ್ನು ಪಡೆದಿದ್ದೇವೆ ಎಂದರೆ ಸರಿಯಲ್ಲ. ಅದೇ ರೀತಿ ನಮ್ಮ ಬ್ಯಾಂಕಿನಲ್ಲಿ ಸಾಲಕ್ಕೆ ಅರ್ಜಿ ಬಂದಾಗ ಖಾಲಿ ಚೆಕ್ ನ್ನು ಪಡೆದುಕೊಳ್ಳುವ ರೂಢಿ ಇದೆ ಎಂದರೆ ಸರಿಯಲ್ಲ . ಸಾಲಕ್ಕಾಗಿ ಅರ್ಜಿ ಬಂದ ಸಂದರ್ಬದಲ್ಲಿ ಆರೋಪಿಯ ಗಮನಕ್ಕೆ ಇಲ್ಲದೇ ಚೆಕ್ ಬುಕ್ ನ್ನು ಆ ಸಂದರ್ಭದಲ್ಲಿ ತಂದಿದ್ದರು ಎಂದರೆ ಸರಿಯಲ್ಲ. ಹಾಗೆ ತಂದಿರುವಂತಹ ಸಂದರ್ಭದದಲ್ಲಿ ಒಂದು ಚೆಕ್ ನ್ನು ನಾವು ತೆಗೆದಿಟ್ಟಕೊಂಡಿದ್ದೇವೆ ಎಂದರೆ ಸರಿಯಲ್ಲ. ನಾವು ಚೆಕ್ ನ್ನು ತೆಗೆದಿರುವುದು ಆರೋಪಿಗೆ ಈ ಪ್ರಕರಣದಲ್ಲಿ ಸಮನ್ಸ ಹಾಗೂ ವಾರಂಟ್ ಬಂದ ನಂತರ ಗೊತ್ತಾಗುತ್ತದೆ ಎಂದರೆ ಸಾಕ್ಷಿ ನಾವು ಚೆಕ್ಕನ್ನು ತಗೆದುಕೊಳ್ಳುವುದಿಲ್ಲ ಎಂದು ನುಡಿದಿರುತ್ತಾರೆ . ನಮ್ಮ ಬ್ಯಾಂಕಿನಲ್ಲಿ ಆರೋಪಿ ಕೊಟ್ಟಿರುವ ಸಾಲದ ಅರ್ಜಿಗ ಯಾವುದೇ ಸಾಲ ಮಂಜೂರಾಗಿಲ್ಲ ಎಂದರೆ ಸರಿಯಲ್ಲ ಹಾಗೂ ನಾವು ಯಾವುದೇ ಸಾಲದ ಹಣವನ್ನು ಸಂದಾಯ ಮಾಡಿದ್ದು ಇಲ್ಲ ಎಂದರೆ ಸರಿಯಲ್ಲ ಆ ಕಾರಣ ನಾವು ಸಾಲ ಮಂಜೂರಾದ ಬಗ್ಗೆ ಆತನಿಗೆ ಸಾಲದ ಹಣ ಸಂದಾಯವಾದ ಬಗ್ಗೆ ಯಾವುದೇ ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ . ಸಾಲದ ಅರ್ಜಿ ಬಂದ ಸಂದರ್ಭದಲ್ಲಿ ನಾನು ಫಿರ್ಯಾದು ಬ್ಯಾಂಕಿನಲ್ಲಿ ಇರಲಿಲ್ಲ ಎಂದರೆ ಸರಿ . ಈ ಮೊಧಲಿನ ಶಾಖಾ ವ್ಯವಸ್ಥಾಪಕರು ಸಾಲದ ಅರ್ಜಿ ಬಂದಾಗ ಚೆಕ್ ನ್ನು ತೆಗೆದಿಟ್ಟುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಹಾಗೆ ತೆಗೆದಿಟ್ಟಕೊಂಡಿರುವ ಚೆಕ್ ನ ಮೇಲೆ ಬರವಣಿಗೆಯನ್ನು ಮಾಡಿ ನಾವು ಈ ರೀತಿ ಬಳಸಿಕೊಂಡಿದ್ದೇವೆ ಎಂದರೆ ಸುಳ್ಳು . ಆ ಚೆಕ್ ನ ಮೇಲೆ

ಆರೋಪಿ ಸಹಿ ಮಾಡಿರಲಿಲ್ಲ ಎಂದರೆ ಸರಿಯಲ್ಲ . ಬ್ಯಾಂಕಿನ ಮೆಮೋ drawers signature required ಎಂದು ವಾಪಸ್ಸು ಬಂದಿದೆ . ಚೆಕ್ ನ ಮೇಲೆ ಯಾವುದೇ ಸಹಿ ಇಲ್ಲದ ಕಾರಣ ಆ ರೀತಿ ಮೇಮೋ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ . ಆ ರೀತಿ ಹಿಂಬರಹ ಬಂದ ನಂತರ ನಾವು ಆರೋಪಿಯ ಸಹಿಯನ್ನು ಆತನ ಅರ್ಜಿಯಲ್ಲಿರುವ ಸಹಿಯನ್ನು ನೋಡಿ ನಕಲು ಮಾಡಿ ಪ್ರಕರಣ ದಾಖಿಸುವ ಸಂದರ್ಭದಲ್ಲಿ ಚೆಕ್ ನಲ್ಲಿ ಸಹಿ ಹಾಕಿದ್ದೇವೆ ಎಂದರೆ ಸುಳ್ಳು . ಒಂದುವೇಳೆ ಚೆಕ್ ನ ಮೇಲೆ ಸಹಿ ಇದ್ದಲ್ಲಿ drawers signature required ಮೇಮೋ ಕೊಡುತ್ತಿರಲಿಲ್ಲ ಎಂದರೆ ಸಾಕ್ಷಿ ಚೆಕ್ ನ ಮೇಲೆ ಸಹಿ ಇದೆ ಎಂದು ನುಡಿದಿರುತ್ತಾರೆ . ಚೆಕ್ ನ ಹಾಜರು ಪಡಿಸುವ ಪೂರ್ವದಲ್ಲಿ ಚೆಕ್ ನ ಮೆಲೆ ಸಹಿ ಇತ್ತು ಎಂದು ತೋರಿಸಲು ಬ್ಯಾಂಕನವರ ಸಾಕ್ಷಿ ವಿಚಾರಣೆ ಮಾಡಿಸಲು ತೊಂದರೆ ಇಲ್ಲ . ನಾವು ನೋಟಿಸನ್ನು ಹಿರೇಗುತ್ತಿ ವಿಳಾಸಕ್ಕೆ ಕಳಿಸಿದ್ದೇವೆ ಎಂದು ತೋರಿಸಲು ಅಂಚೆ ಇಲಾಖೆಯವರ ಸಾಕ್ಷಿ ವಿಚಾರಣೆ ಮಾಡಿಸಲು ತೊಂದರೆ ಇಲ್ಲ . ಈ ಎರಡು ಸಂಗತಿಗಳನ್ನು ಪುರಾವೆ ಮಾಡಲು ನಾವು ತಯಾರಿದ್ದೇವೆ . ನಾವು ಆರೋಪಿತನಿಗೆ ಯಾವುದೇ ಹಣವನ್ನು ಸಂದಾಯ ಮಾಡದೇ ಇದ್ದ ಕಾರಣ ಆತ ನಮ್ಮ ವಿರುದ್ಧ ಕ್ರಮ ಕೈಗೊಳ್ಳಬಹುದು ಎಂಬ ಕಾರಣಕ್ಕೆ ನಾವು ಬೇರೆ ವಿಳಾಸಕ್ಕೆ ನೋಟಿಸನ್ನು ಕಳಿಸಿದ್ದೇವೆ ಎಂದರೆ ಸರಿಯಲ್ಲ . ಈ ಪ್ರಕರಣ ದಾಖಲಾದ ನಂತರ ಆರೊಪಿಗೆ ನಮ್ಮ ಬ್ಯಾಂಕಿಗೆ 2-3 ಬಾರಿ ಬಂದಿದ್ದಾರೆ ಎಂದರೆ ಸರಿಯಲ್ಲ . ಆ ಸಂದರ್ಭದಲ್ಲಿ ನಾನೇ ಮ್ಯಾನೇಜರ್ ಆಗಿದ್ದೆ . ಸಾಲದ ಅರ್ಜಿ ಬಂದಾಗ ಗಣಪತಿ ಗೌಡಾ ಮ್ಯಾನೇಜರ ಆಗಿದ್ದರು. ಆ ಮ್ಯಾನೇಜರ್ ಗೆ ಭೇಟಿ ಆಗಿ ಆರೋಪಿ ನನ್ನ ವಿರುದ್ಧ ಏಕೆ ಸುಳ್ಳು ಪ್ರಕರಣ ದಾಖಲಿಸಿದ್ದೀರಿ ನಾನು ಕ್ರಮ ಕೈಗೊಳ್ಳುತ್ತೇನೆ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಗಣಪತಿ ಗೌಡಾ ರವರು ಈಗ ನಮ್ಮ ಬ್ಯಾಂಕಿನಲ್ಲಿ ಇಲ್ಲ , ರಾಜೀನಾಮೆ ಕೊಟ್ಟು ಹೋಗಿದ್ದಾರೆ . ನೀವು ಯಾವುದೇ ಕಾನೂನು ಕ್ರಮ ಕೈಗೊಳ್ಳುವುದು ಬೇಡಾ ನಾವು ಪ್ರಕರಣವನ್ನು ಹಿಂತೆಗೆದುಕೊಳ್ಳುತ್ತೇವೆ ಎಂದು ಗಣಪತಿ ಗೌಡಾ ರವರು ಆಸ್ವಾಸನೆ ಕೊಟ್ಟಿದ್ದರು ಎಂದರೆ ಸುಳ್ಳು . ನನ್ನ ಮೇಲೆ ಸುಳ್ಳು ಪ್ರಕರಣ ದಾಖಲಿಸಿದ್ದಾರೆ ಎಂದು ಆರೋಪಿ ನಮ್ಮ ಮುಖ್ಯ ಕಚೇರಿಗೆ ಕೂಡ ತಿಳಿಸಿದ್ದರು ಎಂದರೆ ಸುಳ್ಳು . ಆ ಬಗ್ಗೆ ನಮ್ಮ ಮುಖ್ಯ ಕಚೇರಿಯವರು

ಪಿಡಬ್ಲೂ಼ಃ 1

ಗಣಪತಿ ಗೌಡಾ ರವರಿಗೆ ವಿಚಾರಿಸಿದ ಕಾರಣ ಅವರು ರಾಜೀನಾಮೆ ಕೊಟ್ಟು ಹೋಗಿರುತ್ತಾರೆ ಎಂದರೆ ಸುಳ್ಳು . drawers signature required ಎಂಬುದು 138 ಎನ್ ಐ ಆಕ್ಟಗೆ ಅನ್ವಯವಾಗುವುದಿಲ್ಲ ಎಂದರೆ ಸರಿಯಲ್ಲ . ಈ ಪ್ರಕರಣಕ್ಕೆ ಎಲ್ಲಾ ಮಾಹಿತಿಯನ್ನು ನಾನು ಗಣಪತಿ ಗೌಡಾರವರಿಗೆ ಕೇಳಿಕೊಂಡು ಕೊಟ್ಟಿರುತ್ತೇನೆ ಎಂದರೆ ಸರಿ . ಸಾಕ್ಷಿ ಕೇಸನ್ನು ದಾಖಲಿಸುವಾಗ ನಾನು ಇದ್ದೆ . ಸಾಲ ಕೊಡುವಾಗ ಅವರು ಇದ್ದರು ಎಂದು ನುಡಿದಿರುತ್ತಾರೆ . ಅವರು ಕೊಟ್ಟಿರುವ ಸುಳ್ಳು ಮಾಹಿತಿ ಮೇರೆಗೆ ನಾನು ಈ ಪ್ರಕರಣವನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ . ಈ ಪ್ರಕರಣ ಸುಳ್ಳು ಎಂದು ಗೊತ್ತಿದ್ದರೂ ಕೂಡ ನಾನು ಮುಂದುವರೆಸಿಕೊಂಡು ಬಂದಿದ್ದೇನೆ ಎಂದರೆ ಸರಿಯಲ್ಲ . ನಾನು ಫಿರ್ಯಾದಿಯಲ್ಲಿ ಹೇಳಿದಂತಹ ಯಾವುದೇ ಹಣವನ್ನು ಆರೋಪಿ ಕಾನೂನು ಬದ್ಧವಾಗಿ ಕೊಡುವುದು ಇಲ್ಲ ಎಂದರೆ ಸರಿಯಲ್ಲ . ನಾವು ದಾಖಲಿಸಿದ ಸುಳ್ಳು ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸುಳ್ಳು .

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.